ಹೇಗೆ ಗುಲಾಮಗಿರಿಯನ್ನು ಪೋಷಿಸುತ್ತಾ ಬಂದವು ಎಂಬುದು ಅರ್ಥವಾಗುತ್ತದೆ. ಮೆಕ್ಕಾ ವಾಣಿಜ್ಯ ನಗರಿ. ಅಲ್ಲಿಗೆ ತಾಯಿಫ್, ಶಾಮ್, ಯಮನ್‌ನಿಂದ ವರ್ತಕರು ಆಗಮಿಸುತ್ತಿದ್ದರು. ಇಸ್ಲಾಂ ಪೂರ್ವದಲ್ಲಿ ಮಹಿಳೆಯರನ್ನು ದಾಸಿಯರನ್ನಾಗಿ ಬಳಸಿಕೊಂಡು ಮಾರಾಟ ಮಾಡುವ ಕ್ರಮವಿತ್ತು. ಪ್ರವಾದಿ ಮಹಮ್ಮದ್ ಪೈಗಂಬರರ ಕಾಲದಲ್ಲಿ ಈ ಅನಿಷ್ಟ ಪದ್ಧತಿಗೆ ಮುಕ್ತಿ ನೀಡಲಾಯಿತು.

ವಿಶ್ವಾಮಿತ್ರನ ಕಾರಣದಿಂದಾಗಿ ಎಲ್ಲವನ್ನೂ ಕಳೆದುಕೊಂಡ ರಾಜ ಸತ್ಯಹರಿಶ್ಚಂದ್ರ ತನ್ನ ಮಡದಿ ಚಂದ್ರಮತಿ, ಮಗ ಲೋಹಿತಾಶ್ವರನ್ನು ಕಾಶಿಯಲ್ಲಿ ಮಾರಾಟ ಮಾಡುವ ಮತ್ತು ತಾನೂ ವೀರಬಾಹುವಿನ ಸೇವಕನಾಗಿ ಕೆಲಸ ಮಾಡುವ ಕಥೆ ಓದಿದ್ದೇವೆ.

ಸಾಹಿತಿ ಕೆ. ಸದಾಶಿವ ಅವರ, 'ರಾಮನ ಸವಾರಿ ಸಂತೆಗೆ ಹೋದದ್ದು' ದಾಂಪತ್ಯ ಬದುಕಿನ ಜೊತೆಗೆ ಚಿಕ್ಕ ಬಾಲಕನ ಕಣ್ಣೋಟದ ಮೂಲಕ ಕಟ್ಟಲ್ಪಟ್ಟ ಕಥೆಯಾಗಿದೆ. ಇಲ್ಲಿ ಸಂತೆಯ ಅಬ್ಬರಕ್ಕಿಂತ ಬದುಕಿನ ಅಬ್ಬರ ಹೆಚ್ಚಿದೆ. ಸಂತೆಗೆ ಸಂಬಂಧಪಟ್ಟಂತೆ ಜನಪದ ಸಾಹಿತ್ಯವು ವಿಪುಲವಾಗಿ ಕಂಡುಬರುತ್ತದೆ. 'ಸಂತೆ ನೆರೆಯುವುದಕ್ಕಿಂತ ಮುಂಚೆ ಗಂಟುಕಳ್ಳರು ನೆರೆದರು', 'ಕಳ್ಳಕಳ್ಳರು ಕೂಡಿ ಸಂತೆ ಕಟ್ಟಿದ ಹಾಗೆ', 'ಸಂತೆ ಸೂಳೆ ನೆಚ್ಚಿ, ಮನೆ ಹೆಂಡತಿ ಬಿಟ್ರು', 'ಸಂತೇಲಿ ಏನು ಅಗ್ಗ ಅಂದರೆ ಕದ್ದರೆ ಗುದ್ದು ಅಗ್ಗ', 'ಸಂತೆ ಹೊತ್ತಿಗೆ ಮೂರು ಮೊಳ ನೇದ ಹಾಗೆ', 'ಚಿಂತಿಲ್ಲದವನಿಗೆ ಸಂತೆಯಲ್ಲೂ ನಿದ್ದೆ' ಎಂಬ ಗಾದೆಗಳನ್ನು ಕಾಣಲು ಸಾಧ್ಯ.

ಸಂತೆಯನ್ನು ಕುರಿತ ಒಗಟುಗಳನ್ನೂ ಕಾಣ ಬಹುದು. 'ಸಂತೆಗೆ ಹೋಗೋನ ತಿಕ ತಲೆಕೆಳಗು (ಕೋಳಿ)', 'ಸಂತೆ ಹೋಗ್ತಾ ಚಿಂತೆ ಮಾಡ್ತಾ ಬೆನ್ನು ತಟ್ತಾ ಬೆಲೆ ಮಾಡ್ತಾ (ಮಡಿಕೆ')', 'ಸಂತೆ ದಾರೀಲಿ ಕೆಂಪವ್ವ ಕೂತವಳೆ (ತಾಂಬೂಲ)', 'ಸಂತ್ಯಾಗ್ ತರ್ತಾರೆ ಮನ್ಯಾಗ್ ಅಳ್ತಾರೆ (ಈರುಳ್ಳಿ)', 'ಸಂತೆ ಜನಕೆಲ್ಲ ಒಂದೇ ಹಾಸಿಗೆ ಒಂದೇ ಹೊದಿಕೆ (ಭೂಮಿ- ಆಕಾಶ)' ಹೀಗೆ ಜನಪದ ಗಾದೆಗಳು ರಸಗವಳವಿದ್ದಂತೆ.

ಹೆಚ್ಚಿನ ಕನ್ನಡ ಸಿನಿಮಾಗಳಲ್ಲಿ ಖಳನಾಯಕ ನಾಯಕಿಯನ್ನು ಛೇಡಿಸುವುದು, ಕೀಟಲೆ ಮಾಡುವುದೇ ಸಂತೆಯಲ್ಲಿ. ನಾಯಕ ಬಂದು ಖಳನಾಯಕ ಮತ್ತು ಆತನ ತಂಡಕ್ಕೆ ಹಿಗ್ಗಾಮುಗ್ಗಾ ಹೊಡೆದು ಫೈಟ್ ಮಾಡುವುದೇ ಸಂತೆಯ ಮಧ್ಯೆ. 'ಕಿರಗೂರಿನ ಗಯ್ಯಾಳಿಗಳು' ಸಿನಿಮಾದಲ್ಲಿ ಬೆಣ್ಣೆಮುರುಕು ಮತ್ತು ಪ್ರಣಯ ಪ್ರಸಂಗಗಳು ನಡೆಯುವುದು ಸಂತೆಯಲ್ಲಿ. ಹೀಗೆ ಸಮೃದ್ಧ ಕಥನಗಳನ್ನು ಅನಾವರಣಗೊಳಿಸಿದ ನಮ್ಮೂರ ಸಂತೆ ಮತ್ತು ಸಂತೆಮಾಳ ತನ್ನ ಗತದ ವೈಭವವನ್ನು ಕಳೆದು ಸೊರಗಿ ಹೋಗಿದೆ. ಕುಡುಕರು ಬಂದು ಕುಡಿದು ಉಚ್ಚೆ ಹೊಯ್ಯಲು, ವಲಸಿಗರು ಬಂದು ಟೆಂಟು ಹಾಕಿ ವಾಸಿಸಲು, ಹಸು, ಕರು ಕಟ್ಟಿಹಾಕಲು ನಮ್ಮೂರ ಸಂತೆ ಮಾಳ ಅಥವಾ ಮಾರ್ಕೆಟ್ ಬಳಕೆಯಾಗುತ್ತಿದೆ. ಮೀನು, ಮಾಂಸದಂಗಡಿಯವರು ಕೋಳಿ, ಕುರಿ ಶುಚಿ ಮಾಡಿ ತ್ಯಾಜ್ಯಗಳನ್ನು ಸಂತೆಮಾಳದ ಪಕ್ಕದಲ್ಲೇ ಹಾಕುವರು. ಈ ಕುರಿತು ಎಷ್ಟೇ ಪತ್ರ ಬರೆದರೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ಕ್ರಮ ಕೈಗೊಳ್ಳದೆ ಸುಮ್ಮನೆ ಕುಳಿತಿದ್ದಾರೆ. ಪತ್ರಿಕೆಯಲ್ಲಿ ವರದಿ ಪ್ರಕಟವಾದರೂ ಅದರ ಕುರಿತು ಕ್ಯಾರೇ ಎನ್ನದೇ ರೋಗವನ್ನು ಹಬ್ಬುವ ಕಾರ್ಯ ನಡೆಯುತ್ತಿದೆ. ಇನ್ನು ಸುಂಕ ವಸೂಲಿ ಮಾಡುವ ಸುಂಕದಾರ ಪ್ರತೀ ಸಂತೆಯ ದಿನ ವ್ಯಾಪಾರಿಗಳೊಂದಿಗೆ ನಿಗದಿತ ಸುಂಕಕ್ಕಿಂತ ಹೆಚ್ಚು ಪಡೆಯಲು ವಾಗ್ವಾದಕ್ಕಿಳಿಯುತ್ತಾನೆ.

ವಸ್ತುವಿನ ಬೆಲೆಯನ್ನು ಕೂಗಿ ಬೆಲೆ ಹೇಳಿ, ವ್ಯಾಪಾರ ಮಾಡುತ್ತಿದ್ದ ವ್ಯಾಪಾರಸ್ಥರು ಈಗ ಸಣ್ಣದೊಂದು ಸ್ಪೀಕರ್‌ನಲ್ಲಿ ಧ್ವನಿಯನ್ನು ರೆಕಾರ್ಡ್ ಮಾಡಿ ಹಾಕಿ ಬಿಡುತ್ತಾರೆ. ಸ್ಪೀಕರ್ ಬೆಲೆಯನ್ನು ಕೂಗಿ ಹೇಳುವುದು ಕೃತಕವಾಗಿ ತೋರುತ್ತದೆ. ನಮ್ಮೂರ ಸಂತೆಯಲ್ಲಿ ವ್ಯಾಪಾರಸ್ಥರು ಈಗ ಆಶ್ರಯಿಸಿರುವುದು ನಮ್ಮೂರಿನ ಜನರನ್ನಲ್ಲ. ಅಸ್ಸಾಮಿನಿಂದ, ಬಿಹಾರದಿಂದ, ಉತ್ತರ ಪ್ರದೇಶದಿಂದ ನಮ್ಮೂರ ತೋಟದ ಕೆಲಸಕ್ಕೆ ಬಂದವರನ್ನು. ಸಂಜೆಯಾಗುತ್ತಲೇ ಸಂತೆ ಮುಗಿದ ಬಯಲು ಅಲ್ಲಲ್ಲಿ ಅಸ್ತವ್ಯಸ್ತ.

ನಮ್ಮೂರ ಸಂತೆಯಲ್ಲಿ ದೊಡ್ಡದೊಡ್ಡ ಮೂಟೆ ಹೊರುವ ಉಮ್ಮರಣ್ಣ ಇಂದು ನಮ್ಮೊಂದಿಗಿಲ್ಲ. ತರಕಾರಿ ಮಾರುವವರಿಗೆ ಟೀ, ಕಾಫಿ ತಂದು ಕೊಡುವ ಅಲೀಮಜ್ಜಿಗೆ ಈಗ ನಡೆಯಲು ಸಾಧ್ಯವಾಗುತ್ತಿಲ್ಲ. ಎಷ್ಟೋ ಸಂತೆಗಳು ಮುಗಿದವು. ಆದರೆ ಸಂತೆಯ ನೆನಪುಗಳು ಮತ್ತೆ ಮತ್ತೆ ಕಾಡುತ್ತಿವೆ. ●